
UASB LIBRARY
Newspaper Clippings
Pg .1 Thursday 18-11-2021 Jai Kisan



ಬೆಂಗಳೂರು ಕೃಷಿ ವಿವಿ ಕುಲಪತಿ ಡಾ.ಎಸ್.ರಾಜೇಂದ್ರಪ್ರಸಾದ್ ಕಿವಿಮಾತು

ಸಮಗ್ರ ಕೃಷಿ: ಅಧಿಕ ಇಳುವರಿ

ಪಾಂಡವಪುರ: ಜಿಲ್ಲೆಯಲ್ಲಿ ಸಣ್ಣ, ಅತಿ ಸಣ್ಣ ರೈತರು ಹೆಚ್ಚಾಗಿರುವ ಹಿನ್ನೆಲೆ ಹೊಸ ಹೊಸ ತಾಂತ್ರಿಕತೆ ಬಳಸಿಕೊಂಡು ಸಮಗ್ರ ಕೃಷಿ ಪದ್ಧತಿಯನ್ನು ಅನುಸರಿಸುವ ಮೂಲಕ ರೈತರು ತಮ್ಮ ಆದಾಯ ದ್ವಿಗುಣಗೊಳಿಸಿಕೊಳ್ಳಬೇಕು ಎಂದು ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಕುಲಪತಿ ಡಾ.ಎಸ್.ರಾಜೇಂದ್ರಪ್ರಸಾದ್ ಹೇಳಿದರು.

ತಾಲೂಕಿನ ಸುಂಕಾತೊಣ್ಣೂರು ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಆವರಣದಲ್ಲಿ ಕೃಷಿ ವಿಶ್ವವಿದ್ಯಾಲಯ ಬೆಂಗಳೂರು, ಕೃಷಿ ಮಹಾವಿದ್ಯಾಲಯ ವಿ.ಸಿ.ಫಾರಂ ಮಂಡ್ಯ ಮತ್ತು ಚಾಮರಾಜನಗರ, ಜಿ.ಪಂ ಮತ್ತು ಕೃಷಿ, ತೋಟಗಾರಿಕೆ, ಪಶುಪಾಲನೆ, ಅರಣ್ಯ, ಮೀನುಗಾರಿಕೆ, ರೇಷ್ಮೆ ಇಲಾಖೆಗಳು ಮಂಡ್ಯ, ಕೃಷಿ ವಿಜ್ಞಾನ ಕೇಂದ್ರ ಮತ್ತು ವಲಯ ಕೃಷಿ ಸಂಶೋಧನಾ ಕೇಂದ್ರ, ವಿ.ಸಿ.ಫಾರಂ ಮಂಡ್ಯ ಇವರ ಸಂಯುಕ್ತಾಶ್ರಯದಲ್ಲಿ ನಡೆದ ಅಂತಿಮ ವರ್ಷದ ಬಿಎಸ್ಸಿ (ಹಾನರ್ಸ್) ಕೃಷಿ ವಿದ್ಯಾರ್ಥಿಗಳ (ಸ್ಟುಡೆಂಟ್ ರೆಡಿ) ಹಾಗೂ ಡಿಪ್ಲೊಮಾ (ಕೃಷಿ) ವಿದ್ಯಾರ್ಥಿಗಳ ಗ್ರಾಮೀಣ ಕೃಷಿ ಕಾರ್ಯಾನುಭವ ಶಿಬಿರದ ಕೃಷಿ ವಸ್ತು ಪ್ರದರ್ಶನ ಉದ್ಘಾಟಿಸಿ ಮಾತನಾಡಿದರು.

ಮಂಡ್ಯ ಜಿಲ್ಲೆಯಲ್ಲಿ ಭತ್ತ, ರಾಗಿ, ಕಬ್ಬು ಬಹುಮುಖ್ಯ ಬೆಳೆಗಳಾಗಿವೆ. ಇಲ್ಲಿ ನೀರಿನ ಸೌಲಭ್ಯ ಚೆನ್ನಾಗಿದೆ. ರೈತರು ಸರಿಯಾದ ರೀತಿಯಲ್ಲಿ ನೀರಿನ ಸೌಲಭ್ಯ ಬಳಸಿಕೊಂಡು ಕೃಷಿ ಮಾಡಬೇಕು.

ವೈವಿಧ್ಯಮಯ ಬೆಳೆಗಳನ್ನು ಬೆಳೆಯಬೇಕು. ಜತೆಗೆ ಆದಾಯ ದ್ವಿಗುಣಗೊಳಿಸಲು ಸಪ್ತ ಸೂತ್ರಗಳನ್ನು ಅಳವಡಿಸಿ ಹೆಚ್ಚಿನ ಇಳುವರಿ ಬರುವಂತೆ ನೋಡಿಕೊಂಡು ಎಟಿಎಂನಂತಿರುವ ಕೋಳಿ, ಕುರಿ, ಮೇಕೆ ಸಾಕಾಣಿ ಮಾಡುವ ಮೂಲಕ ಜಾನುವಾರುಗಳ ಕಡೆ ಗಮನಹರಿಸಿ ಆದಾಯ ಹೆಚ್ಚಿಸಿಕೊಳ್ಳಬೇಕು ಎಂದರು.

ವಾಣಿಜ್ಯ ಬೆಳೆಗಳಾದ ಕಬ್ಬು, ಭತ್ತ, ರಾಗಿ ಬೆಳೆಯುವ ಜತೆಗೆ ಮೌಲಗಳನ್ನು ಸಾಕುವುದು, ಹೊಸ ಆನ್ವೇಷಣೆ ಮಾಡುವುದು, ಹೈನುಗಾರಿಕೆ ಮಾಡುವುದು ಹೀಗೆ ಸಮಗ್ರ ಕೃಷಿ ಮಾಡಬೇಕು. ಸಿರಿಧಾನ್ಯಗಳನ್ನು ಹೆಚ್ಚು ಬಳಸಿ ಉತ್ಪನ್ನಗಳನ್ನು ತಯಾರಿಸಿದರೆ ಆದಾಯ ದ್ವಿಗುಣವಾಗಲಿದೆ. ಸರ್ಕಾರ ರೈತರಿಗೆ ಪ್ರೋತ್ಸಾಹ ನೀಡಿ ಹಲವು ಸವಲತ್ತುಗಳನ್ನು ನೀಡಿದೆ. ಜತೆಗೆ ಕೆವಿಕೆ, ವಿ.ಸಿ.ಫಾರಂ ಯುವ ರೈತ ಮಹಿಳೆಯರಿಗೆ ಸಾಕಷ್ಟು ತರಬೇತಿಗಳನ್ನು ನೀಡುತ್ತಿದೆ. ಇವುಗಳನ್ನು ಸದ್ಬಳಕೆ ಮಾಡಿಕೊಂಡು ರೈತರು ಖರ್ಚು ಕಡಿಮೆ ಮಾಡಿ ಕೃಷಿಯಲ್ಲಿ ಅದಾಯ ಹೆಚ್ಚಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಅಧ್ಯಕ್ಷತೆ ವಹಿಸಿದ್ದ ವಿ.ಸಿ.ಫಾರಂ ಕೃಷಿ ಮಹಾವಿದ್ಯಾಲಯದ ಡೀನ್ ಡಾ.ಎಸ್.ಎಸ್.ಪ್ರಕಾಶ್ ಕೃಷಿ ವಿಶ್ವವಿದ್ಯಾಲಯ ವಿಸ್ತರಣಾ ನಿರ್ದೇಶಕ ಡಾ.ಎನ್.ದೇವಕುಮಾರ್, ಜಂಟಿ ಕೃಷಿ ನಿರ್ದೇಶಕ ಡಾ.ಬಿ.ಎಸ್.ಚಂದ್ರಶೇಖರ್ ಮಾತನಾಡಿದರು.

ಕೃಷಿ ಮಹಾವಿದ್ಯಾಲಯದ ಡಾ.ಸಿ.ದೊರೆಸ್ವಾಮಿ, ಡಾ.ವೆಂಕಟೇಶ್, ಡಾ.ಡಿ.ರಘುಪತಿ, ಡಾ.ರಂಗನಾಥ್, ಡಾ.ಎಂ.ಪಿ.ರಾಜಣ್ಣ, ಉಪ ಕೃಷಿ ನಿರ್ದೇಶಕಿ ಮಮತಾ, ಸಹಾಯಕ ಕೃಷಿ ನಿರ್ದೇಶಕಿ ಪ್ರಿಯಾದರ್ಶಿನಿ, ತೋಟಗಾರಿಕೆ ಹಿರಿಯ ಸಹಾಯಕ ನಿರ್ದೇಶಕಿ ಎಸ್.ಪಿ.ಸೌಮ್ಯ ಇತರರಿದ್ದರು.



ವಿದ್ಯಾರ್ಥಿಗಳಿಂದ ಗ್ರಾಮ ವಾಸ್ತವ್ಯ

ವಸ್ತು ಪ್ರದರ್ಶನದಲ್ಲಿ ಸಮಗ್ರ ಬೇಸಾಯ ಪದ್ಧತಿಗಳ ತಾಂತ್ರಿಕತೆಗಳು, ಅರಣ್ಯ ಕೃಷಿ, ರೇಷ್ಮೆ ಕೃಷಿ, ರಾಗಿ ಮತ್ತು ಸಿರಿಧಾನ್ಯಗಳು, ಮೌಲವರ್ಧಿತ ಉತ್ಪನ್ನಗಳು ಮತ್ತು ಪೌಷ್ಟಿಕ ಆಹಾರ ತಯಾರಿಕಾ ತಾಂತ್ರಿಕತೆಗಳು, ಮೇವು ಮತ್ತು ದ್ವಿದಳ ಧಾನ್ಯ ಬೆಳೆಗಳು, ಜಲಾನಯನ ಮಾದರಿಗಳು, ಕೃಷಿ ಯಂತ್ರೋಪಕರಣಗಳು, ಮಣ್ಣು ವಿಜ್ಞಾನ, ತೋಟಗಾರಿಕೆ, ಸಮಗ್ರ ಕೀಟ ಮತ್ತು ರೋಗ ನಿರ್ವಹಣೆ, ಮಾಹಿತಿ ಕೇಂದ್ರ, ವಿ.ಸಿ.ಫಾರಂ ಮತ್ತು ಚಾಮರಾಜನಗರ ಆವರಣ, ಭತ್ತದ ಸುಧಾರಿತ ತಾಂತ್ರಿಕತೆಗಳು, ಕಬ್ಬಿನ ಸುಧಾರಿತ ತಾಂತ್ರಿಕತೆಗಳು, ಪಶು ಸಂಗೋಪನೆ, ಅಣಬೆ ಬೇಸಾಯ ಮತ್ತು ಜೈವಿಕ ಗೊಬ್ಬರಗಳ ತಾಂತ್ರಿಕತೆಗಳು, ಕೃಷಿ ಮಾರುಕಟ್ಟೆ, ಸಹಕಾರ ಬೆಳೆ ವಿಮೆ ಯೋಜನೆಗಳ ಮಾಹಿತಿ, ಮುಸುಕಿನ ಜೋಳ (ಮೆಕ್ಕೆಜೋಳ) ಸೇರಿದಂತೆ ಆಕರ್ಷಕ ಮಳಿಗೆಗಳನ್ನು ತೆರೆದಿದ್ದು, ಇವು ರೈತರ ಗಮನಸೆಳೆದವು. 137 ಕೃಷಿ ವಿದ್ಯಾರ್ಥಿಗಳು 12 ವಾರಗಳು, 3 ತಿಂಗಳವರೆಗೆ ಗ್ರಾಮ ವಾಸ್ತವ್ಯ ಮಾಡಿದ್ದರು.

18-11-2021
Hd Pg 13

ಮಣ್ಣಿಲ್ಲದೆ ತರಕಾರಿ, ಎರಡೇ ಗಂಟೆಯಲ್ಲಿ ಗೊಬ್ಬರ!

ಬೆಂಗಳೂರು: ಭವಿಷ್ಯದ ಸವಾಲು ಮತ್ತು ಸಮಸ್ಯೆಗಳಿಗೆ ಪರಿಹಾರ ಸೂಚಿಸುವಂತಹ ಹಾಗೂ ದೇಶದ ಆರ್ಥಿಕತೆಗೆ ಉತ್ತೇಜನ ನೀಡುವಂತಹ ನೂರಾರು ನಾವೀನ್ಯ ಆವಿಷ್ಕಾರಗಳು ಮತ್ತು ಪರಿಹಾರಗಳ ಅನಾವರಣಕ್ಕೆ 'ಬೆಂಗಳೂರು ತಾಂತ್ರಿಕ ಶೃಂಗ-2021' 'ವರ್ಚುವಲ್' ಮೂಲಕ ಮುಖ್ಯ ಭೂಮಿಕೆ ನಿರ್ಮಿಸಿಕೊಟ್ಟಿದೆ.

ಕೇವಲ ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನಕ್ಕೆ ಸಂಬಂಧಿಸಿದ ಕಂಪೆನಿಗಳಲ್ಲದೇ, ಕೃಷಿ, ತ್ಯಾಜ್ಯ ವಿಲೇವಾರಿ, ಅರಣ್ಯೀಕರಣ, ಒಳಚರಂಡಿ ಸೇರಿದಂತೆ ಸ್ಥಳೀಯ ಸಮಸ್ಯೆಗಳಿಗೆ ಪರಿಹಾರ ಸೂಚಿಸುವ ಹಲವು ನವೋದ್ಯಮಗಳು ವರ್ಚುವಲ್ ವೇದಿಕೆಯಲ್ಲಿ ತಮ್ಮ ಉತ್ಪನ್ನಗಳನ್ನು ಪ್ರದರ್ಶಿಸಿದ್ದು, ಎಲ್ಲರ ಗಮನಸೆಳೆಯುವಂತಿವೆ.

ಬೆಂಗಳೂರಿನ ಥಣಿಸಂದ್ರದಲ್ಲಿರುವ 'ಹೈಡ್ರೋಪೋರ್' ಎಂಬ ಸ್ಟಾರ್ಟಪ್ ಸಂಸ್ಥೆಯು, ಯಾವುದೇ ಮಣ್ಣು ಮತ್ತು ಗೊಬ್ಬರ ಬಳಸದೇ ನಗರ ಪ್ರದೇಶದಲ್ಲಿನ ಮನೆಗಳು ಮತ್ತು ಟೆರೇಸ್‌ಗಳಲ್ಲಿ ಕೇವಲ ನೀರನ್ನು ಬಳಸಿ, ಸೊಪ್ಪುಹಾಗೂ ತರಕಾರಿಗಳನ್ನು ಬೆಳೆಯುವಂತಹ



ವಿಭಿನ್ನ ತಂತ್ರಗಳ ಅನಾವರಣ

ಸುಧಾರಿತ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಿದೆ. ಹೈಡ್ರೋಪೋರ್ ತಂತ್ರಜ್ಞಾನದ ಮೂಲಕ ಮಣ್ಣನ್ನೇ ಬಳಸದೆ ಕೇವಲ 12 ಸಾವಿರ ರೂ. ಗಳಲ್ಲಿ 34 ಸೊಪ್ಪು, ತರಕಾರಿಗಳನ್ನು ಬೆಳೆಯುವಂತಹ ಒಳಾಂಗಣ ಕೈ ತೋಟವನ್ನು ಸಂಸ್ಥೆ ಅಭಿವೃದ್ಧಿಪಡಿಸಿದೆ ಎಂದು ಸಂಸ್ಥೆಯ ಮುಖ್ಯಸ್ಥ ಬಿ.ಮಥಿ ಥುಮಿಲನ್ ಹೇಳಿದರು.

ಬೆಂಗಳೂರಿನ ತ್ರಿವೇಣಿ ಟೆಕ್ ಸಂಸ್ಥೆ ಪ್ರದರ್ಶಿಸಿರುವ 'ಕ್ಲೀನ್‌ಕ್ವೀನ್' ಯಂತ್ರ ಅಡುಗೆಮನೆಯ ತ್ಯಾಜ್ಯವನ್ನು ಕೇವಲ ಎರಡೇ ಗಂಟೆಗಳ ಅವಧಿಯಲ್ಲಿ ಒಣ ಪುಡಿಯಾಗಿ ಪರಿವರ್ತಿಸಿಕೊಡಬಲ್ಲದು. ರಾಯಚೂರಿನ ಆಸ್ಪಲ್ಲ ಸಂಸ್ಥೆ ಗಿಡಗಳನ್ನು ಸುಲಭವಾಗಿ ಬೆಳೆಸಲು ಉಪಯೋಗಿಸಬಹುದಾದ 'ಸೀಡ್ ವೂಂಬ್' ತಂತ್ರಜ್ಞಾನ ರೂಪಿಸಿದೆ. ಅರಣ್ಯೀಕರಣದ ಉದ್ದೇಶಕ್ಕಾಗಿ ಸೀಡ್ ಬಾಲ್‌ಗಳಿಗಿಂತಲೂ ಸೀಡ್ ವೂಂಬ್ ತಂತ್ರಜ್ಞಾನ ಉತ್ತಮ ಎಂದು ಸಂಸ್ಥೆ ಹೇಳಿಕೊಂಡಿದೆ.

ಈ ಬಾರಿ ಶೇ.25ರಷ್ಟು ಭೌತಿಕ ಮೇಳ ಮತ್ತು ಉಳಿದಂತೆ ನಾನಾ ಗೋಷ್ಠಿಗಳು, ವಸ್ತು ಪ್ರದರ್ಶನ ಸೇರಿದಂತೆ ಶೇ.75ರಷ್ಟು ಮೇಳವನ್ನು ವರ್ಚುವಲ್ ಮೂಲಕವೇ ಆಯೋಜಿಸಲಾಗಿದೆ.

ಎಕ್ಸಿಬಿಷನ್ ಡೈರೆಕ್ಟರಿಯಲ್ಲಿ ಸ್ಟಾರ್ಟ್‌ಅಪ್, ಕಾರ್ಪೊರೇಟ್ ಐಟಿ-ಬಿಟಿ, ಜಿಐಎ ಪಾರ್ಟನರ್ಸ್, ರೀಸರ್ಚ್ ಆ್ಯಂಡ್ ಡೆವಲಪ್‌ಮೆಂಟ್, ಸಾಫ್ಟ್‌ವೇರ್ ಟೆಕ್ನಾಲಜಿ ಪಾರ್ಕ್ಸ್ ಆಫ್ ಇಂಡಿಯಾ ಎಂಬ ಪ್ರತ್ಯೇಕ ಬಿನ್‌ಗಳನ್ನು ಮಾಡಿ, ತಮ್ಮ ಉತ್ಪನ್ನಗಳು ಮತ್ತು ಆವಿಷ್ಕಾರಗಳ ಪ್ರದರ್ಶನಕ್ಕೆ ಅವಕಾಶ ಕಲ್ಪಿಸಲಾಗಿದೆ.

For more information visit
University Library Website
Web - uasbagrilibindia.org
E-mail- librarian@uasbangalore.edu.in

18-11-2021
Vk Pg 02

ಕೃಷಿ ಸುಧಾರಣೆಗೆ ತಂತ್ರಜ್ಞಾನ ಪೂರಕವಾಗಲಿ

ಮೂರು ದಿನಗಳ 'ಬೆಂಗಳೂರು ಟೆಕ್ ಸಮಿಟ್-2021'ಕ್ಕೆ ಉಪ ರಾಷ್ಟ್ರಪತಿ ಎಂ. ವೆಂಕಯ್ಯ ನಾಯ್ಡು ಚಾಲನೆ

ಬೆಂಗಳೂರು: ದೇಶದ ಮೂಲ ಸಂಸ್ಕೃತಿ ಕೃಷಿ ಮತ್ತು ಅವಲಂಬಿತ ರೈತರು ಎದುರಿಸುತ್ತಿರುವ ಹಲವು ರೀತಿಯ ಸವಾಲುಗಳಿಗೆ ಪರಿಹಾರ ಕಲ್ಪಿಸುವ ನಿಟ್ಟಿನಲ್ಲಿ ಆವಿಷ್ಕಾರಗಳು ಹೆಚ್ಚು ಕೇಂದ್ರಿತವಾಗಬೇಕು. ಇದರಲ್ಲಿ ತಂತ್ರಜ್ಞಾನ ದಿಗ್ಗಜರ ಜವಾಬ್ದಾರಿ ಅಧಿಕವಾಗಿದೆ ಎಂಬ ಕೂಗು ಏಷ್ಯಾದ ಅತಿದೊಡ್ಡ ಮೇಳ 'ಬೆಂಗಳೂರು ಟೆಕ್ ಸಮಿಟ್'ನಲ್ಲಿ ಕೇಳಿಬಂತು.

ವರ್ಷದಿಂದ ವರ್ಷಕ್ಕೆ ಟೆಕ್ ಸಮಿಟ್ ತನ್ನ ವ್ಯಾಪ್ತಿ ವಿಸ್ತರಿಸುತ್ತಿದೆ. ಹತ್ತಾರು ಕ್ಷೇತ್ರಗಳಲ್ಲಿ ಹೊಸ ಆವಿಷ್ಕಾರಗಳು ಮುನ್ನೆಲೆಗೆ ಬರುತ್ತಿವೆ. ನೀತಿಗಳು ಸೇರಿದಂತೆ ಇದೆಲ್ಲದಕ್ಕೂ ಪೂರಕ ವಾತಾವರಣ ಕೂಡ ಎಲ್ಲೆಡೆ ನಿರ್ಮಾಣವಾಗುತ್ತಿದೆ. ಇದರೊಂದಿಗೆ ದೇಶದ ಮೂಲ ಸಂಸ್ಕೃತಿ ಕೃಷಿ ಸುಧಾರಣೆಗೆ ಹೆಚ್ಚು ಒತ್ತು ನೀಡುವ ಅವಶ್ಯಕತೆ ಇದೆ. ಆಗ ಈ ಮೇಳ ಮತ್ತಷ್ಟು ಅರ್ಥಪೂರ್ಣಗೊಳ್ಳುತ್ತದೆ. ಇದು ನಮ್ಮೆಲ್ಲರ ಜವಾಬ್ದಾರಿ ಕೂಡ ಆಗಿದೆ ಎಂದು ಗಣ್ಯರು ಅಭಿಪ್ರಾಯಪಟ್ಟರು.

ಮೂರು ದಿನಗಳ 'ಬೆಂಗಳೂರು ಟೆಕ್ ಸಮಿಟ್-2021'ಕ್ಕೆ ಬುಧವಾರ ಚಾಲನೆ ನೀಡಿ ಮಾತನಾಡಿದ ಉಪ ರಾಷ್ಟ್ರಪತಿ ಎಂ. ವೆಂಕಯ್ಯ ನಾಯ್ಡು 'ತಂತ್ರಜ್ಞಾನಗಳು ಸಾಮಾನ್ಯರ ಬದುಕಿನಲ್ಲಿ ಬದಲಾವಣೆಗೆ ಕಾರಣವಾಗಬೇಕು. ಅದರಲ್ಲೂ ವಿಶೇಷವಾಗಿ ನಮ್ಮದು ಕೃಷಿ ಪ್ರಧಾನ ರಾಷ್ಟ್ರವಾಗಿದ್ದು ಆ ಕ್ಷೇತ್ರದ ಸುಧಾರಣೆಗೆ ಪೂರಕವಾದ ತಂತ್ರಜ್ಞಾನಗಳು ಅಭಿವೃದ್ಧಿಗೊಳ್ಳಬೇಕು. ಹಾಗೂ ಅವುಗಳು ರೈತರಿಗೆ ತಲುಪುವಂತಾಗಬೇಕು' ಎಂದು ಹೇಳಿದರು.

ಉದ್ಯೋಗ ಸೃಷ್ಟಿಯಲ್ಲಿ ಹಾಸಿಗೆ ವಲಯದ ಪಾತ್ರ ಬಹುಮುಖ್ಯ. ಇದಕ್ಕೆ ಪೂರಕವಾಗಿ ಪ್ರಧಾನಿಯವರು 'ಸುಧಾರಣೆ-ಸಾಧನೆ-ಪರಿವರ್ತನೆ' ಎಂಬುದನ್ನೇ ಮಂತ್ರವಾಗಿಸಿಕೊಂಡು ನೀತಿಗಳನ್ನು ರೂಪಿಸುತ್ತಿದ್ದಾರೆ ಎಂದು ಹೇಳಿದರು.

ಹೂಡಿಕೆ ಅವಶ್ಯಕತೆ- ಸಿಎಂ: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮಾತನಾಡಿ, 'ಟೆಕ್ ಸಮಿಟ್ ವರ್ಷದಿಂದ ವರ್ಷಕ್ಕೆ ದೊಡ್ಡ ಮಟ್ಟದಲ್ಲಿ ನಡೆಯುವುದರ ಜತೆಗೆ ಯಶಸ್ವಿಯಾಗಿಯೂ ಆಗುತ್ತಿದೆ. ಇಲ್ಲಿ ಅನಾವರಣಗೊಳ್ಳುವ ತಂತ್ರಜ್ಞಾನಗಳು ಮತ್ತು ಆವಿಷ್ಕಾರಗಳು ರೈತರು, ಸಾಮಾನ್ಯ ಜನರ ಬಳಿಗೆ ಕೊಂಡೊಯ್ಯುವ ಮೂಲಕ ಇದರಲ್ಲಿ ಮತ್ತಷ್ಟು ಹೂಡಿಕೆಗಾರಿಕೆ ತರುವ ಅವಶ್ಯಕತೆ ಇದೆ. ಇದಕ್ಕೆ ಪೂರಕವಾಗಿ ಸರ್ಕಾರದ ನೀತಿಗಳು ಮತ್ತು ವಾತಾವರಣವನ್ನು ನಿರ್ಮಿಸಲಾಗುತ್ತಿದೆ' ಎಂದು ಅಭಿಪ್ರಾಯಪಟ್ಟರು.

'ಬೆಂಗಳೂರು ಮತ್ತು ಒಟ್ಟಾರೆಯಾಗಿ ರಾಜ್ಯದಲ್ಲಿ ಮನುಷ್ಯನ ಪ್ರತಿಭೆಯ ವಿಕಸನಕ್ಕೆ ತಕ್ಕ ವಾತಾವರಣವಿದ್ದು ಉದ್ಯಮಗಳ ಬೆಳವಣಿಗೆಗೆ ಪೂರಕವಾದ ರಚನಾತ್ಮಕ ನೀತಿಗಳಿವೆ. ಪ್ರತಿಯೊಂದು ಉದ್ಯಮವನ್ನೂ ರಾಜ್ಯವು ಮುಕ್ತವಾಗಿ ಸ್ವಾಗತಿಸಿದೆ' ಎಂದ ಅವರು, ರಾಜ್ಯವು ಐಟಿ-ಬಿಟಿ ತಂತ್ರಜ್ಞಾನ, ಬಾಹ್ಯಾಕಾಶ, ವೈಮಾಂತರಿಕ್ಷ, ಸಂಶೋಧನೆ ಮತ್ತು ಅಭಿವೃದ್ಧಿ, ಸೆಮಿಕಂಡಕ್ಟರ್ ಹೀಗೆ ಎಲ್ಲದರಲ್ಲೂ ಇಡೀ ದೇಶಕ್ಕೇ ಅಗ್ರಸ್ಥಾನದಲ್ಲಿದೆ. ಇದರ ಜತೆಗೆ ಕೌಶಲ್ಯಪೂರ್ಣ ಮಾನವ ಸಂಪನ್ಮೂಲ ಸೃಷ್ಟಿಯಲ್ಲೂ ಪ್ರಥಮ ಸ್ಥಾನದಲ್ಲಿದೆ. ಹೀಗಾಗಿ ರಾಜ್ಯವು ತಂತ್ರಜ್ಞಾನದ ಭವಿಷ್ಯದ ಬೆಳವಣಿಗೆಗೆ ಪ್ರಶಸ್ತವಾಗಿದೆ' ಎಂದು ವಿವರಿಸಿದರು.

ಐಟಿ-ಬಿಟಿ ಮತ್ತು ವಿಜ್ಞಾನ ಹಾಗೂ ತಂತ್ರಜ್ಞಾನ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ, 'ಕೋವಿಡ್ ಪಿಡುಗಿನ ನಂತರ ಆಭಿವೃದ್ಧಿಯ ಮಾನದಂಡಗಳು ಬದಲಾಗಿದ್ದು ರಾಜ್ಯವು ಈ ಪರಿಸ್ಥಿತಿಯನ್ನು ತಂತ್ರಜ್ಞಾನದ ಬಲದಿಂದ ಸಕಾರಾತ್ಮಕವಾಗಿ ಬಳಸಿಕೊಳ್ಳುತ್ತಿದೆ' ಎಂದರು. ರಾಜ್ಯಪಾಲ ತಾವರ್ ಚಂದ್ ಗೆಹಲೋತ್, ಕೈಗಾರಿಕಾ ಸಚಿವ ಮುರುಗೇಶ್ ನಿರಾಣಿ, ಐಟಿ-ಬಿಟಿ ಇಲಾಖೆಯ ಹೆಚ್ಚುವರಿ ಕಾರ್ಯದರ್ಶಿ ಇ.ವಿ.ರಮಣ ರೆಡ್ಡಿ ನಿರ್ದೇಶಕಿ ಮೀನಾ ನಾಗರಾಜ್, ಐಟಿ, ಬಿಟಿ ಮತ್ತು ಸ್ಟಾರ್ಟಪ್ ವಿಷನ್ ಗ್ರೂಪ್ ಗಳ ಮುಖ್ಯಸ್ಥರಾದ ಕ್ರಮವಾಗಿ ಕ್ರಿಸ್ ಗೋಪಾಲಕೃಷ್ಣನ್, ಕಿರಣ್ ಮಜುಂದಾರ್ ಷಾ ಮತ್ತು ಪ್ರಶಾಂತ್ ಪ್ರಕಾಶ್ ಮತ್ತಿತರರು ಉಪಸ್ಥಿತರಿದ್ದರು. ಇನ್ಫೋಸಿಸ್ ಪ್ರಧಾನ ನಫ್ತಾಲಿ ಬೆನೆಟ್, ಕಿಂಡ್ರಿಲ್ ಕಂಪನಿಯ ಸಿಇಒ ಮಾರ್ಟಿನ್ ಶ್ರೋಟರ್ ಶೃಂಗವನ್ನು ಉದ್ಘಾಟಿಸಿ ವರ್ಚುಯಲ್ ಮೂಲಕ ಮಾತನಾಡಿದರು.



ಬೆಂಗಳೂರಿನಲ್ಲಿ ಬುಧವಾರದಿಂದ ಆರಂಭಗೊಂಡ 'ಬೆಂಗಳೂರು ಟೆಕ್ ಸಮಿಟ್-2021'ರಲ್ಲಿ ಉಪ ರಾಷ್ಟ್ರಪತಿ ಎಂ.ವೆಂಕಯ್ಯ ನಾಯ್ಡು, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಐಟಿ-ಬಿಟಿ ಮತ್ತು ವಿಜ್ಞಾನ ಹಾಗೂ ತಂತ್ರಜ್ಞಾನ ಸಚಿವ ಡಾ.ಸಿ.ಎನ್. ಅಶ್ವತ್ಥ ನಾರಾಯಣ, ರಾಜ್ಯಪಾಲ ತಾವರ್ ಚಂದ್ ಗೆಹಲೋತ್, ಕೈಗಾರಿಕಾ ಸಚಿವ ಮುರುಗೇಶ್ ನಿರಾಣಿ ಸೇರಿ ಹಲವು ಗಣ್ಯರು ಪಾಲ್ಗೊಂಡಿದ್ದರು.

ಆಸ್ಟ್ರೇಲಿಯ ಕನ್ಸೋಲೇಟ್ ಜನರಲ್ ಕಚೇರಿ ಆರಂಭ

ನಗರದಲ್ಲಿ ಶೀಘ್ರ ಆಸ್ಟ್ರೇಲಿಯ ಕನ್ಸೋಲೇಟ್ ಜನರಲ್ ಕಚೇರಿ ತೆರೆಯಲಾಗುವುದು ಎಂದು ಆಸ್ಟ್ರೇಲಿಯ ಪ್ರಧಾನಿ ಸ್ಕಾಟ್ ಮಾರಿಸನ್ ತಿಳಿಸಿದರು. ಟೆಕ್ ಸಮಿಟ್‌ನಲ್ಲಿ ವರ್ಚುವಲ್ ಆಗಿ ಮಾತನಾಡಿದ, 'ಭಾರತದೊಂದಿಗೆ ಅದರಲ್ಲೂ ವಿಶೇಷವಾಗಿ ಕರ್ನಾಟಕದೊಂದಿಗಿನ ಆಸ್ಟ್ರೇಲಿಯ ಬಾಂಧವ್ಯ ಟೆಕ್ ಸಮಿಟ್‌ನಿಂದ ಗಟ್ಟಿಗೊಳ್ಳುತ್ತಿದೆ. ಶೀಘ್ರದಲ್ಲೇ ಬೆಂಗಳೂರಿನಲ್ಲಿ ಆಸ್ಟ್ರೇಲಿಯ ಕನ್ಸೋಲೇಟ್ ಜನರಲ್ ಕಚೇರಿ ಕೂಡ ತೆರೆಯಲು ಉದ್ದೇಶಿಸಲಾಗಿದೆ' ಎಂದು ಹೇಳಿದರು.

ಪುನೀತ್‌ಗೆ ಉಪರಾಷ್ಟ್ರಪತಿ ಕಂಬನಿ

ಉಪರಾಷ್ಟ್ರಪತಿ ವೆಂಕಯ್ಯ ನಾಯ್ಡು ನಟ ಪುನೀತ್ ರಾಜ್‌ಕುಮಾರ್ ಅವರ ನಿಧನಕ್ಕೆ ಕಂಬನಿ ಮಿಡಿದರು. ಕನ್ನಡ ಚಿತ್ರರಂಗದ ಜನಪ್ರಿಯ ಮತ್ತು ಸಮಾಜಮುಖಿ ನಟ ಪುನೀತ್ ರಾಜಕುಮಾರ್ ಅವರ ಅಕಾಲಿಕ ಆಗಲಿಕೆ ಶುಂಬಲಾರದ ನಷ್ಟ ಎಂದು ಸಂತಾಪ ಸೂಚಿಸಿದರು. ಇದಕ್ಕೂ ಮುನ್ನ ಕನ್ನಡದಲ್ಲೇ ಸರಣಿಯಾಗಿ ಭಾಷಣ ಆರಂಭಿಸಿದ ಅವರು, ಕೆಲ ಸಾಲುಗಳನ್ನು ಮಾತನಾಡಿ ಗಮನ ಸೆಳೆದರು.

ರಾಜ್ಯದಲ್ಲಿ ಶೀಘ್ರ ಬರಲಿದೆ 'ಆರ್ ಆಂಡ್ ಡಿ ನೀತಿ'

ಬೆಂಗಳೂರು: ರಾಜ್ಯದಲ್ಲಿ ಶೀಘ್ರ 'ಸಂಶೋಧನೆ ಮತ್ತು ಅಭಿವೃದ್ಧಿ ನೀತಿ' (ಆರ್ ಆಂಡ್ ಡಿ) ಜಾರಿಗೆ ಬರಲಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು. ಬೆಂಗಳೂರು ಟೆಕ್ ಸಮಿಟ್‌ನಲ್ಲಿ ಭಾಗವಹಿಸಿ ಮಾತನಾಡಿ, 'ಶಾಲಾ-ಕಾಲೇಜು, ವಿಶ್ವವಿದ್ಯಾಲಯಗಳು, ಖಾಸಗಿ ಕಂಪನಿಗಳಲ್ಲಿ ಸ್ಯಾರೇಜ್ ಕೇಂದ್ರಿತ ಸಂಶೋಧನೆ ಮತ್ತು ಅಭಿವೃದ್ಧಿ ಕೇಂದ್ರಗಳನ್ನು ತೆರೆಯಲು ಉದ್ದೇಶಿಸಲಾಗಿದೆ. ನೂತನ ನೀತಿಯು ಈ ಎಲ್ಲ ಅಂಶಗಳನ್ನೂ ಒಳಗೊಂಡಿರಲಿದೆ ಎಂದು ಹೇಳಿದರು.

ಕನ್ನಡ ಅಳವಡಿಕೆ- ಕಾನೂನು ಪರಿಶೀಲನೆ

ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಕನ್ನಡವನ್ನು ಉನ್ನತ ಶಿಕ್ಷಣದಲ್ಲಿ ಅಳವಡಿಸುವ ಕುರಿತ ಪ್ರಶ್ನೆಗೆ ಪ್ರತಿಕ್ರಿಯಿಸಿದ ಸಿಎಂ ಬೊಮ್ಮಾಯಿ, ಇದು ಬಹಳ ವರ್ಷಗಳಿಂದ ಇರುವ ಪ್ರಶ್ನೆ. ಕಾನೂನಿನ ಪರಿಶೀಲನೆಗೆ ಸರ್ಕಾರ ಆಗತ್ಯ ಕ್ರಮ ವಹಿಸಿದೆ ಎಂದಷ್ಟೇ ಹೇಳಿದರು. ಬೆಂಗಳೂರು ಟೆಕ್ ಸಮಿಟ್‌ನಲ್ಲಿ ವಿಶ್ವದಾದ್ಯಂತ ಏಳು ಸಾವಿರಕ್ಕೂ ಹೆಚ್ಚು ಗಣ್ಯರು ವರ್ಚುಯಲ್ ಆಗಿ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿದ್ದಾರೆ. ಹಲವಾರು ಕಂಪನಿಗಳು ಆರೋಗ್ಯ ಕ್ಷೇತ್ರ, ಕೃತಕ ಬುದ್ಧಿಮತ್ತೆ, ನವೀಕರಿಸಬಹುದಾದ ಇಂಧನ, ಏರೋಸ್ಪೇಸ್ ಸೇರಿದಂತೆ ಹೈಟೆಕ್ ತಂತ್ರಜ್ಞಾನದ ಕ್ಷೇತ್ರದಲ್ಲಿ ಆಸಕ್ತಿ ವಹಿಸಿವೆ ಎಂದು ಮಾಹಿತಿ ನೀಡಿದರು.

18-11-2021 Hd Pg 02

18-11-2021 Hd Pg 01

ವರದಿ ಸಲ್ಲಿಸುವಂತೆ ತೋಟಗಾರಿಕೆ, ಕೃಷಿ ಇಲಾಖೆಗೆ ಸೂಚನೆ

ಸಮೀಕ್ಷೆ ಬಳಿಕ ಬೆಳೆಹಾನಿ ಪರಿಹಾರ

• ದಿಗಂತ ವರದಿ, ಬೆಂಗಳೂರು

ಮಳೆಯಿಂದ ಹಾಳಾದ ಬೆಳೆಹಾನಿ ಸಮೀಕ್ಷೆ ನಡೆಸಲಾಗುತ್ತಿದ್ದು, ಬೆಳೆ ಪರಿಹಾರ ನೀಡಲು ಶೀಘ್ರದಲ್ಲೇ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ತಿಳಿಸಿದರು.

ಬುಧವಾರ ಬೆಂಗಳೂರಿನಲ್ಲಿ ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದ ಅವರು, ಬೆಳೆ ಹಾನಿಯನ್ನು ಸಮೀಕ್ಷೆ ಮಾಡಲಾಗುತ್ತಿದ್ದು,



ಬೆಳೆ ಹಾನಿಯಿಂದ ತರಕಾರಿ ಮುಂತಾದ ಆಗತ್ಯ ವಸ್ತುಗಳ ಬೆಲೆ ಏರಿಕೆಯಾಗುವ ಬಗ್ಗೆ ಕಣ್ಣಿರಿಸಲಾಗಿದ್ದು, ಭತ್ತದ ಹಾಗೂ ಇತರೆ ಧಾನ್ಯಗಳ ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ನೀಡಿ ಖರೀದಿ ಕುರಿತು ಮಹತ್ವದ ಸಭೆಯನ್ನು ನಡೆಸಲಾಗುತ್ತಿದೆ. ಈ ಬಗ್ಗೆ ನಿಗಾ ಇಡಲಾಗಿದೆ ಎಂದರು.

ಶೀಘ್ರಗಾಗಿ ಹಾಳಾಗುವ ವಸ್ತುಗಳ ಬಗ್ಗೆಯೂ ಸಂಪೂರ್ಣ ವರದಿ ಸಲ್ಲಿಸುವಂತೆಯೂ ತೋಟಗಾರಿಕೆ ಮತ್ತು ಕೃಷಿ ಇಲಾಖೆಗೆ ಸೂಚಿಸಿದೆ. ಇನ್ನು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯರ ಪತ್ರ ತಲಪುವ ಮೊದಲೇ ಬೆಳೆ ಸಮೀಕ್ಷೆ ಕೈಗೊಂಡಿದ್ದು, ಪರಿಹಾರ ನೀಡಿಕೆಯತ್ತಲೂ ಗಮನ ಹರಿಸಲಾಗಿದೆ ಎಂದರು.




ಚಿಕ್ಕಬಳ್ಳಾಪುರದಲ್ಲಿ ಹೆಚ್ಚು ಮಳೆಯಾಗಿದ್ದು, ತುಂಬಿ ಹರಿಯುತ್ತಿರುವ ರಂಗಧಾಮ ಕೆರೆಯಲ್ಲಿ ಮೀನು ಹಿಡಿಯುತ್ತಿರುವ ಜನತೆ.

ಸದ್ಯಕ್ಕೆ ಮಳೆ ನಿಲ್ಲದು

ಬೆಂಗಳೂರು: ಈಶಾನ್ಯ ಹಿಂಗಾರು ಮಳೆ ರಾಜ್ಯದಲ್ಲಿ ಚುರುಕಾಗಿದ್ದು, ಇನ್ನೂ ಎರಡು ದಿನ ಭಾಗಶಃ ಮೋಡ ಕವಿದ ವಾತಾವರಣ ಮುಂದುವರಿಯಲಿದೆ. ಕೆಲವೆಡೆ ಹಗುರ ಮಳೆಯಾಗುವ ಸಾಧ್ಯತೆ ಇದೆ. ರಾಜ್ಯದ ಹಲವೆಡೆ ಸಾಧಾರಣ ಮಳೆಯಾಗಿದೆ. ಕೆಲವೆಡೆ ಭಾರೀ ಮಳೆಯಾದ ವರದಿಯಾಗಿದೆ. 9

ಚುರುಕಾದ ಕೃಷಿ ವಿಚಕ್ಷಣಾ ದಳ

ಬೆಂಗಳೂರು: ರಾಜ್ಯದಲ್ಲಿ ರೈತರಿಗೆ ಯಾವುದೇ ರೀತಿಯ ಕಳಪೆ ಕೃಷಿ ಪರಿಕರಗಳು, ರಸಗೊಬ್ಬರ, ಕೀಟನಾಶಕಗಳು ಸರಬರಾಜಾಗದಂತೆ ಕೃಷಿ



ವಿಚಕ್ಷಣಾ ದಳವನ್ನು ಇನ್ನಷ್ಟು ಚುರುಕುಗೊಳಿಸಲಾಗುವುದು ಎಂದು ಕೃಷಿ ಸಚಿವ ಬಿ.ಸಿ.ಪಾಟೀಲ್ ತಿಳಿಸಿದರು. ವಿಕಾಸಸೌಧದ ಕಚೇರಿಯಲ್ಲಿ ಕೃಷಿ ವಿಚಕ್ಷಣಾ ದಳದ ಪ್ರಗತಿ ಪರಿಶೀಲನಾ ಸಭೆ ನಡೆಸಿ ಮಾತನಾಡಿದ ಅವರು, ಕೃಷಿ ವಿಚಕ್ಷಣಾ ದಳದ ಕಾರ್ಯನಿರ್ವಹಣೆಯನ್ನು ಇನ್ನಷ್ಟು ಚುರುಕುಗೊಳಿಸುವುದರೊಂದಿಗೆ ಕಳಪೆ ರಸಗೊಬ್ಬರ, ಕೀಟನಾಶಕಗಳು ತಯಾರಾಗದಂತೆ ಅಕ್ರಮ ದಾಸ್ತಾನು, ಕಾಳಸಂತೆಯಲ್ಲಿ ಮಾರಾಟವಾಗದಂತೆ ತಳಮಟ್ಟದಲ್ಲಿಯೇ ಅವುಗಳನ್ನು ಬುಡಸಹಿತ ಕಿತ್ತುಹಾಕಬೇಕೆಂದರು.

ಮುಖ್ಯಮಂತ್ರಿ ಕಚೇರಿಗೆ ದೂರು ನಿರಂತರ | ಅನ್ನದಾತರಿಗೆ ಕಿರುಕುಳ ನೀಡಬೇಡಿ ಎಂದು ಆರ್ಥಿಕ ಇಲಾಖೆ ಎಚ್ಚರಿಕೆ

ರೈತರಿಗೆ ವಾಣಿಜ್ಯ ಬ್ಯಾಂಕುಗಳಲ್ಲಿನ ಬೆಳೆ ಸಾಲ ಮನ್ನಾ ಕಿರಿಕಿರಿ

■ ಶ್ರೀಕಾಂತ್ ಶೇಷಾದ್ರಿ ಬೆಂಗಳೂರು

ವಾಣಿಜ್ಯ ಬ್ಯಾಂಕುಗಳಲ್ಲಿ 2018-19ನೇ ಸಾಲಿನಲ್ಲಿ ರೈತರು ಪಡೆದಿರುವ ಬೆಳೆ ಸಾಲ ಮನ್ನಾ ಲೆಕ್ಕ ಇನ್ನೂ ಪೂರ್ಣ ಪ್ರಮಾಣದಲ್ಲಿ ಬಗೆಹರಿಯದೇ ಇರುವುದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಇಕ್ಕಟ್ಟಿನಲ್ಲಿ ಸಿಲುಕಿಸಿದೆ. ಸಾಲ ಮನ್ನಾ ವಿಚಾರದಲ್ಲಿ ಬ್ಯಾಂಕುಗಳು ಒತ್ತಡ ಹೇರುತ್ತಿವೆ, ಕಿರುಕುಳ ನೀಡುತ್ತಿವೆ ಎಂದು ರೈತರು ಸಿಎಂ ಕಚೇರಿಗೆ ಪತ್ರ ಬರೆದು ಗೋಳು ತೋಡಿಕೊಳ್ಳಲಾರಂಭಿಸಿದ್ದಾರೆ. ಜತೆಗೆ ಗೃಹ ಸಚಿವ ಆರಗ ಜ್ಞಾನೇಂದ್ರ ಅವರೂ ಸಿಎಂಗೆ ಪತ್ರ ಬರೆದು ತಮ್ಮ ಕ್ಷೇತ್ರದ ಸಮಸ್ಯೆಯನ್ನು ಪ್ರಸ್ತಾಪಿಸಿ, ಗೊಂದಲಕ್ಕೆ ತೆರೆ ಎಳೆಯುವಂತೆ ಮನವಿ ಸಲ್ಲಿಸಿರುವ ಪ್ರಸಂಗವೂ ನಡೆದಿದೆ. ಇದಾದ ಬಳಿಕ ಮುಖ್ಯಮಂತ್ರಿ ಸೂಚನೆ ಮೇರೆಗೆ ಆರ್ಥಿಕ ಇಲಾಖೆ ಎಲ್ಲ ಬ್ಯಾಂಕುಗಳಿಗೆ ಸೂಚನೆ ಕಳಿಸಿ, ರೈತರಿಗೆ ವಾಸ್ತವ ವಿಷಯ ತಿಳಿಸಿ, ಕಿರುಕುಳ ನೀಡಬೇಡಿ ಎಂದು ಕಿವಿಹಿಂಡಿದೆ.

'ನನ್ನ ಕ್ಷೇತ್ರದ ರೈತರು ವಿವಿಧ ಬ್ಯಾಂಕುಗಳಿಂದ ಬೆಳೆ ಸಾಲ ಪಡೆದಿದ್ದು, ಸರ್ಕಾರ ರೈತರ ಸಾಲ ಮನ್ನಾ ಮಾಡಿರುವುದರಿಂದ ಬಾಕಿ ಇರುವ ಮೊತ್ತವನ್ನು ಕಟ್ಟಿರುವುದಿಲ್ಲ. ಆದರೆ ಸರ್ಕಾರದಿಂದ ಮನ್ನಾ ಮಾಡಲಾದ ಸಾಲದ ಮೊತ್ತ ನಮಗೆ ಜಮೆ ಆಗಿಲ್ಲ ಎಂಬ ಕಾರಣ ನೀಡಿ ಸಾಲದ ಮೊತ್ತವನ್ನು ಮರುಪಾವತಿ ಮಾಡುವಂತೆ ಬ್ಯಾಂಕುಗಳು ರೈತರ ಮೇಲೆ ಒತ್ತಡ ಹಾಕುತ್ತಿವೆ ಎಂದು ಗೃಹ ಸಚಿವರು ಸಿಎಂಗೆ ಬರೆದ ಪತ್ರದಲ್ಲಿ ಉಲ್ಲೇಖಿಸಿದ್ದರು.

ಜತೆಗೆ ಬ್ಯಾಂಕುಗಳಿಗೆ ಸೂಕ್ತ ನಿರ್ದೇಶನ ನೀಡಿ ಬಾಕಿ ಇರುವ ರೈತರ ಸಾಲ ಮರುಪಾವತಿ ಕುರಿತು ಒತ್ತಡ ಹೇರದಂತೆ ಸರ್ಕಾರದಿಂದ ನಿರ್ದೇಶನ ನೀಡಿ ಎಂದು ಕೋರಿದ್ದರು. ಈ ಬೆಳವಣಿಗೆಯನ್ನು ಗಂಭೀರವಾಗಿ ಪರಿಗಣಿಸಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಬ್ಯಾಂಕುಗಳಿಗೆ ಸೂಕ್ತ ಸಂದೇಶ ನೀಡಲು ಕ್ರಮಕೈಗೊಳ್ಳಿ ಎಂದು ಆರ್ಥಿಕ ಇಲಾಖೆ ನಿರ್ದೇಶನ ನೀಡಿದ್ದರು. ಆ ಪ್ರಕಾರ ಅಕ್ಟೋಬರ್ 30ರಂದು ಬ್ಯಾಂಕುಗಳಿಗೆ ಹಣಕಾಸು ಇಲಾಖೆ ಅಪರ ಮುಖ್ಯಕಾರ್ಯದರ್ಶಿ ಪತ್ರ ಬರೆದಿದ್ದಾರೆ. ಸಾಲ ಮನ್ನಾ ವ್ಯಾಪ್ತಿಗೆ ಬಂದ ರೈತರಿಗೆ ಸಾಲ ಕಟ್ಟುವಂತೆ ಒತ್ತಡ ಹೇರಬೇಡಿ, ಈ ಬಗ್ಗೆ ಬ್ಯಾಂಕ್ ಶಾಖೆಗಳಿಗೆ ತಿಳಿಸುವುದು ಎಂದು ಮುಖ್ಯಸ್ಥರಿಗೆ ಸೂಚನೆ ನೀಡಿದ್ದಾರೆ. ಯಾವ ಕಾರಣಕ್ಕೆ ಸಮಸ್ಯೆಯಾಗಿದೆ ಎಂದು ಪಟ್ಟಿ ಮಾಡಿದ್ದು, ಎಷ್ಟು ಸಾಲದ ಹಣ ಮರುಪಾವತಿ ಮಾಡಲಾಗಿದೆ, ಇನ್ನೆಷ್ಟು ಪ್ರಕ್ರಿಯೆಯಲ್ಲಿ ಎಂದು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.



ಅಧಿಕಾರಿಗಳು ಹೇಳೋದೇನು?

ಸಾಲ ಮನ್ನಾ ಮಾಡಲು ಹಣ ಬಿಡುಗಡೆ ಮಾಡಲಾಗಿದೆ ಎಂದ ಮೇಲೆ ರೈತರಿಗೆ ಸಿಗದೇ ಎಲ್ಲಿ ಹೋಯಿತು ಎಂಬ ಪ್ರಶ್ನೆಯನ್ನು ಅಧಿಕಾರಿಗಳಿಗೆ ಕೇಳಿದರೆ, ಸಾಲ ಮನ್ನಾ ವ್ಯವಸ್ಥೆಯನ್ನು ಪಾರದರ್ಶಕವಾಗಿ ಮಾಡಲಾಗಿದೆ, ಪ್ರತಿ ಬೆಳವಣಿಗೆಯನ್ನೂ ತಂತ್ರಜ್ಞಾನ ಆಧಾರಿತ ವ್ಯವಸ್ಥೆಯಲ್ಲಿ ತರಲಾಗಿದೆ. ಈಗಲೇ ವೆಬ್‌ಸೈಟ್‌ನಲ್ಲಿದೆ. ಕೆಲವು ಕಡೆದ ರೈತರು ಎರಡು ಕಡೆ ಸಾಲ ಪಡೆದು ಎರಡೂ ಕಡೆ ಮನ್ನಾ ಆಗಬೇಕೆಂದು ಬಯಸಿದ್ದಾರೆ, ಮತ್ತೆ ಕೆಲವು ಪ್ರಕರಣಗಳಲ್ಲಿ ಸೂಕ್ತ ದಾಖಲೆ ಕೊಡುತ್ತಿಲ್ಲ ಅಥವಾ ಅವರ ದಾಖಲೆಯಲ್ಲಿ ಸಮಸ್ಯೆ ಇದೆ. ಬ್ಯಾಂಕುಗಳು ಕೆಲವು ಕಡೆ ಜವಾಬ್ದಾರಿ ಮರೆತಿವೆ. ಒಟ್ಟಾರೆ ಸೂಕ್ತ ದಾಖಲೆ ಕೊಟ್ಟು, ಗೊಂದಲ ಪರಿಹರಿಸಿಕೊಟ್ಟರೆ ಈಗಲೂ ಹಣ ಬಿಡುಗಡೆ ಮಾಡಲು ಅವಕಾಶವಿದೆ ಎಂದು ಹಿರಿಯ ಅಧಿಕಾರಿಗಳು ತಿಳಿಸಿದ್ದಾರೆ.

ಮುಖ್ಯಾಂಶ

ಈವರೆಗೆ ಕೃಷಿ ಬೆಳೆ ಸಾಲ/ಪ್ರೋತ್ಸಾಹ ಧನ ಪಡೆದವರು (ವಾಣಿಜ್ಯ ಬ್ಯಾಂಕ್)
9,83,941

ಪ್ರಕ್ರಿಯೆ ನಡೆದಿರುವ ಪ್ರಕರಣಗಳು
10,982

ಈ ವರೆಗೆ ಪಾವತಿ ಆದ ಮೊತ್ತ
₹7669.68 ಕೋಟಿ

ಸಮಸ್ಯೆಗೆ ಕಾರಣ

- ಆರ್ಹತೆ ನೀಡುವ ಗ್ರೀನ್ ಲಿಸ್ಟ್‌ನಲ್ಲಿ ರೈತರಿಗೆ ಆಪ್ರೂವಲ್ ನೀಡದೇ ಇರುವುದು
- ಸೂಕ್ತ ದಾಖಲೆಯನ್ನು ರೈತರು ಸಲ್ಲಿಕೆ ಮಾಡದಿರುವುದು
- ರೈತರು ನೀಡಿದ ದಾಖಲೆ ಅಪ್‌ಲೋಡ್ ಮಾಡದಿರುವುದು
- ವಿವಿಧ ಹಂತದಲ್ಲಿ ಪ್ರಕ್ರಿಯೆ ಮುಂದುವರಿಯದೇ ಇರುವುದು

ಸಮಸ್ಯೆಯನ್ನು ಸಿಎಂ ಗಮನಕ್ಕೆ ತಂದಿದ್ದೇನೆ, ಬ್ಯಾಂಕ್‌ಗಳ ಜತೆಗೆ ಮೀಟಿಂಗ್ ಮೀಟಿಂಗ್ ಕರೆಯುವಂತೆ ಮನವಿ ಮಾಡಿದ್ದೇವೆ. ಇನ್ನೂ ಶೇ.15ರಿಂದ 20 ರೈತರ ಸಾಲ ಮನ್ನಾ ಆಗಬೇಕಾಗಿದೆ.

ಕುರುಬೂರು ಶಾಂತಕುಮಾರ್ ರೈತ ಮುಖಂಡ

ಕೃಷಿ ವಿಚಕ್ಷಣಾ ದಳ ನಡೆಸುವ ಸದುದ್ದೇಶದ ದಾಳಿ ಸಮಂಜಸ

ಬೆಂಗಳೂರು: ಕಳಪೆ ಗುಣಮಟ್ಟದ ರಸಗೊಬ್ಬರ, ಕ್ರಿಮಿನಾಶಕ ಹಾಗೂ ಬೀಜ ಮಾರಾಟ ಪತ್ತೆಗಾಗಿ ಕೃಷಿ ವಿಚಕ್ಷಣಾ ದಳ ನಡೆಸುವ ಸದುದ್ದೇಶದ ದಾಳಿ ಸಮಂಜಸ ಎಂದು ಕೃಷಿ ಸಚಿವ ಬಿ.ಸಿ.ಪಾಟೀಲ್ ಅಭಿಪ್ರಾಯಪಟ್ಟರು. ವಿಕಾಸಸೌಧದಲ್ಲಿ ಕೃಷಿ ವಿಚಕ್ಷಣಾ ದಳದ ಪ್ರಗತಿ ಪರಿಶೀಲನಾ ಸಭೆ ಅಧ್ಯಕ್ಷತೆವಹಿಸಿ ಮಾತನಾಡಿದ ಅವರು ದಾಳಿಯು ರೈತರಿಗೆ ಉಪಯೋಗವಾಗುವಂತಿರಬೇಕು. ಇಲಾಖೆ ಹಾಗೂ ರೈತರಿಗೆ ದ್ರೋಹ ಬಗೆಯುವ ಯಾರೇ ಕಂಡುಬಂದರೂ ಅಂತಹವರ ವಿರುದ್ಧ ಮುಲಾಜಿಲ್ಲದೇ ಕ್ರಮ ಜರುಗಿಸಬೇಕು ಎಂದು ಸೂಚಿಸಿದರು.

» ಕೃಷಿ ಸಚಿವ ಬಿ.ಸಿ.ಪಾಟೀಲ್ ಕಿವಿಮಾತು

ಕಳಪೆ ರಸಗೊಬ್ಬರ, ಕೀಟನಾಶಕ, ಬೀಜ ತಯಾರು, ಅಕ್ರಮ ದಾಸ್ತಾನು ಹಾಗೂ ಕಾಳಸಂತೆಯನ್ನು ಬೇರುಮಟ್ಟದಲ್ಲಿ ಕಿತ್ತೊಗೆದು, ರೈತರಿಗೆ ಅನ್ಯಾಯವಾಗುವಂತಹ ದುಷ್ಕೃತ್ಯಗಳಲ್ಲಿ ತೊಡಗಿದವರು ಯಾರೇ ಆಗಿರಲಿ ನಿರ್ದಾಕ್ಷಿಣ್ಯ ಕ್ರಮಕೈಗೊಳ್ಳಬೇಕು ಎಂದು ಸೂಚಿಸಿದರು. ಕೃಷಿ ಇಲಾಖೆ ಸಹಾಯವಾಣಿ ಸಂಖ್ಯೆಯನ್ನು ಜಾಗೃತ ಕೋಶಕ್ಕೂ ವಿಸ್ತರಿಸಬೇಕು. ಜಪ್ತಿ ಮಾಡಿದ ಕೃಷಿ ಪರಿಕರಗಳ ವಿಲೇವಾರಿಗೆ ಅಗತ್ಯ ಮಾರ್ಗಸೂಚಿ ಹೊರಡಿಸಬೇಕು. ಪರಿಕರಗಳ ಗುಣಮಟ್ಟ ನಿಯಂತ್ರಣಕ್ಕೆ ಅಗತ್ಯವಾದ ತಂತ್ರಾಂಶ, ಕೆ-ಕಿಸಾನ್ ಆ್ಯಪ್‌ನೊಂದಿಗೆ ಜೋಡಿಸಲು ಕ್ರಮವಹಿಸಬೇಕು ಎಂದು ಅಧಿಕಾರಿಗಳಿಗೆ ಸಲಹೆ ನೀಡಿದರು.



ಕೃಷಿ ಸಚಿವ ಬಿ.ಸಿ.ಪಾಟೀಲ್ ಅಧ್ಯಕ್ಷತೆಯಲ್ಲಿ ಕೃಷಿ ವಿಚಕ್ಷಣಾ ದಳದ ಪ್ರಗತಿ ಪರಿಶೀಲನಾ ಸಭೆ ಬುಧವಾರ ನಡೆಯಿತು. ಇಲಾಖೆ ಪ್ರಧಾನ ಕಾರ್ಯದರ್ಶಿ ಉಮಾಶಂಕರ್, ವಿಚಕ್ಷಣಾ ದಳದ ಅನೂಪ್, ಶಿವಕುಮಾರ್ ಇನ್ನಿತರ ಅಧಿಕಾರಿಗಳು ಉಪಸ್ಥಿತರಿದ್ದರು.

ಪ್ರಮುಖ ದಾಳಿಗಳು

- 416.78 ಲಕ್ಷ ರೂ. ಮೌಲ್ಯದ 1394 ಕ್ವಿಂಟಾಲ್ ಬಿತ್ತನೆ ಬೀಜ ಜಪ್ತಿ, 21 ಪ್ರಕರಣಗಳು ದಾಖಲು ಹಾಗೂ ನ್ಯಾಯಾಲಯದಲ್ಲಿ ದಾವೆ
- 151.04 ಲಕ್ಷ ರೂ. ಮೊತ್ತದ 8309 ಕ್ವಿಂಟಾಲ್ ರಸಗೊಬ್ಬರ ಜಪ್ತಿ, 57 ಪ್ರಕರಣಗಳು ದಾಖಲು ಮತ್ತು ನ್ಯಾಯಾಲಯದಲ್ಲಿ ಮೊಕದ್ದಮೆ
- 82.48 ಲಕ್ಷ ರೂ. ಮೌಲ್ಯದ 8063 ಲೀಟರ್ ಮತ್ತು 6120 ಕೆಜಿ ಕೀಟನಾಶಕ ಜಪ್ತಿ, 41 ಪ್ರಕರಣಗಳು, ದಾಖಲು, ಕೋರ್ಟ್‌ನಲ್ಲಿ ದಾವೆ
- ಒಟ್ಟು 650.30 ಲಕ್ಷ ರೂ. ಮೌಲ್ಯದ ವಿವಿಧ ಬಿತ್ತನೆ ಬೀಜ, ರಸಗೊಬ್ಬರ ಮತ್ತು ಕೀಟನಾಶಕಗಳ ಜಪ್ತಿ, 119 ಪ್ರಕರಣಗಳು ದಾಖಲು
- 21 ರಸಗೊಬ್ಬರ, ಮೂರು ಕೀಟನಾಶಕ, 6 ಬಿತ್ತನೆ ಬೀಜ ಪರವಾನಗಿ ಅಮಾನತು, 4 ಪರವಾನಗಿ ರದ್ದು

18-11-2021 Vv Pg 10

18-11-2021 Kp Pg 06

ಭಾರೀ ಮಳೆಗೆ 7.31 ಲಕ್ಷ ಹೆಕ್ಟೇರ್‌ನಲ್ಲಿ ಬೆಳೆ ಹಾನಿ

ಜುಲೈನಿಂದ ನ.16ರವರೆಗಿನ ಬೆಳೆಹಾನಿ ಅಂದಾಜಿಸಿದ ಕೃಷಿ ಇಲಾಖೆ | ಕಲಬುರಗಿ, ಬೀದರ್, ಬೆಳಗಾವಿಯಲ್ಲಿ ಹೆಚ್ಚು ಹಾನಿ
ಮಳೆಯಿಂದ ಸಾವಿರಾರು ಕೋಟಿ ರು. ರೈತರಿಗೆ ನಷ್ಟ, ನವೆಂಬರ್‌ನಲ್ಲಿ 48600 ಹೆಕ್ಟೇರ್ ಬೆಳೆ ಹಾನಿ, ಕೋಲಾರದಲ್ಲಿ ಹೆಚ್ಚು

• ಸಿದ್ದು ಚಿಕ್ಕಬಳ್ಳೇಕೆರೆ
ಕನ್ನಡಪ್ರಭ ವಾರ್ತೆ ಬೆಂಗಳೂರು

ಭಾರೀ ಮಳೆಗೆ ರಾಜ್ಯದ ರೈತರು ತತ್ತರಿಸಿದ್ದು ಕೈಗೆ ಬರಬೇಕಿದ್ದ ಫಸಲು ಕಣ್ಣ ಮುಂದೆಯೇ ನೆಲಕಚ್ಚುತ್ತಿದೆ. ಕೃಷಿ ಇಲಾಖೆ ಅಂದಾಜಿನ ಪ್ರಕಾರ ಜುಲೈನಿಂದ ನ. 16 ರವರೆಗೂ 7.31 ಲಕ್ಷ ಹೆಕ್ಟೇರ್‌ಗೂ ಅಧಿಕ ಪ್ರದೇಶದಲ್ಲಿ ಬೆಳೆದಿದ್ದ ವಿವಿಧ ಬೆಳೆ ಹಾನಿ ಆಗಿ ಸಾವಿರಾರು ಕೋಟಿ ರು. ನಷ್ಟ ಉಂಟಾಗಿದೆ.

ಬೆಳೆ ಹಾನಿ ಬಗ್ಗೆ ಮೊದಲು ಕೃಷಿ ಇಲಾಖೆ ನಷ್ಟದ ಅಂದಾಜಿನ ಬಗ್ಗೆ ಪ್ರಾಥಮಿಕ ವರದಿಯನ್ನು ಕಂದಾಯ ಇಲಾಖೆಗೆ ಶೀಘ್ರದಲ್ಲೇ ಸಲ್ಲಿಸಲಿದ್ದು, ಬಳಿಕ ಕಂದಾಯ ಮತ್ತು ಕೃಷಿ ಇಲಾಖೆಯಿಂದ ಜಂಟಿ ಸರ್ವೇ ನಡೆಸಿ ಹಾನಿ ಅಂದಾಜು ಮಾಡಲಿವೆ. ಸೆಪ್ಟೆಂಬರ್‌ನಿಂದ ಅಕ್ಟೋಬರ್ ವರೆಗಿನ ಅಂದಾಜನ್ನು ಲೆಕ್ಕ ಹಾಕಲಾಗಿದೆ. ನವೆಂಬರ್‌ನಲ್ಲಿ ಮಳೆ ಮುಂದುವರೆಯುತ್ತಿರುವುದರಿಂದ ಕೃಷಿ ಇಲಾಖೆ ಪ್ರಾಥಮಿಕ ಮಾಹಿತಿ ಸಂಗ್ರಹಿಸುತ್ತಿದ್ದು ಕಂದಾಯ ಇಲಾಖೆಗೆ ರವಾನಿಸುವ ನಿಟ್ಟಿನಲ್ಲಿ ಕಾರ್ಯೋನ್ಮುಖವಾಗಿದೆ.

ಪ್ರಸ್ತುತ ಜುಲೈನಿಂದ ನ.16ರವರೆಗೆ ಮಳೆ ಹಾನಿಯಿಂದ 7.31ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ಹಾನಿಯುಂಟಾಗಿದೆ ಎಂದು ಕೃಷಿ ಇಲಾಖೆ ಅಂದಾಜಿಸಿದೆ. ಇದರಲ್ಲಿ ಉತ್ತರ ಕರ್ನಾಟಕ ಭಾಗದ 3 ಜಿಲ್ಲೆಯಲ್ಲೇ ಮುಕ್ಕಾಲು ಪಾಲು ಹಾನಿ ಸಂಭವಿಸಿದೆ. ಕಲಬುರಗಿಯಲ್ಲಿ2,44,223 ಹೆಕ್ಟೇರ್, ಬೀದರ್‌ನಲ್ಲಿ 1,84,649 ಹೆಕ್ಟೇರ್, ಬೆಳಗಾವಿಯಲ್ಲಿ 1,15,661 ಹೆಕ್ಟೇರ್ ಪ್ರದೇಶದಲ್ಲಿದ್ದ ಬೆಳೆ ಹಾನಿಯಾಗಿದೆ.

ಜುಲೈ ತಿಂಗಳ ಕುಂಭದ್ರೋಣ ಮಳೆಯಿಂದಾಗಿ 19 ಜಿಲ್ಲೆಯ 4.08 ಲಕ್ಷ ಹೆಕ್ಟೇರ್‌ನಲ್ಲಿ ಬೆಳೆದಿದ್ದ ಬೆಳೆ ಹಾನಿಯಾಗಿದ್ದು, ಕೃಷಿ ಇಲಾಖೆ ಆಂತಿಮ ವರದಿ ಸಿದ್ಧಪಡಿಸಿದೆ. ಬೆಳಗಾವಿ ಜಿಲ್ಲೆಯಲ್ಲಿ ಅತಿ ಹೆಚ್ಚು ಅಂದರೆ 4926 ಹೆಕ್ಟೇರ್‌ನಲ್ಲಿ ಬೆಳೆದಿದ್ದ ಭತ್ತ, ಶಿವಮೊಗ್ಗದ4016 ಹೆಕ್ಟೇರ್, ರಾಯಚೂರಿನ1802, ಉತ್ತರ ಕನ್ನಡದ 1652 ಹೆಕ್ಟೇರ್‌ನಲ್ಲಿ ಬೆಳೆದಿದ್ದ ಭತ್ತ ಹಾನಿಗೊಳಗಾಗಿದೆ. ಬೆಳಗಾವಿಯಲ್ಲಿ 12194 ಹೆಕ್ಟೇರ್‌ನಲ್ಲಿ ಬೆಳೆದಿದ್ದ ಮೆಕ್ಕೆಜೋಳ, ಹಾವೇರಿಯ 5032, ಧಾರವಾಡದ 3846 ಹೆಕ್ಟೇರ್‌ನಲ್ಲಿ ಬೆಳೆದಿದ್ದ ಮೆಕ್ಕೆಜೋಳಕ್ಕೆ ಹಾನಿಯಾಗಿದೆ.

ಬೆಳಗಾವಿಯ 14598 ಹೆಕ್ಟೇರ್‌ನಲ್ಲಿ ಬೆಳೆದಿದ್ದ ಸೋಯಾಬೀನ್, ಕಲಬುರಗಿಯ 7267 ಹೆಕ್ಟೇರ್ ಪ್ರದೇಶದ ಉದ್ದು, 32638 ಹೆಕ್ಟೇರ್‌ನ ತೊಗರಿ, ಬೆಳಗಾವಿಯ 2757 ಹೆಕ್ಟೇರ್‌ನ ಶೇಂಗಾ, 1879 ಹೆಕ್ಟೇರ್‌ನ ಹತ್ತಿ, 62058 ಹೆಕ್ಟೇರ್‌ನ ಕಬ್ಬು ಸೇರಿದಂತೆ ಒಟ್ಟಾರೆ 19 ಜಿಲ್ಲೆಯಲ್ಲಿ 2.50 ಲಕ್ಷ ಹೆಕ್ಟೇರ್‌ಗೂ ಹೆಚ್ಚು ಪ್ರದೇಶದಲ್ಲಿದ್ದ ವಿವಿಧ ಬೆಳೆಗಳಿಗೆ ಹಾನಿಯಾಗಿದೆ. ಆಗಸ್ಟ್‌ನಲ್ಲಿ ಬೀದರ್ ಜಿಲ್ಲೆಯಲ್ಲಿ ಹೆಸರು 266 ಹೆಕ್ಟೇರ್, ಉದ್ದು 310, ತೊಗರಿ, 453, ಸೋಯಾ 697 ಹೆಕ್ಟೇರ್ ಹಾಗೂ ದಾವಣಗೆರೆ ಜಿಲ್ಲೆಯಲ್ಲಿ ಬೆಳೆದಿದ್ದ 1692 ಹೆಕ್ಟೇರ್ ಮೆಕ್ಕೆ ಜೋಳಕ್ಕೆ ಮಳೆಯಿಂದ ಹಾನಿ ಉಂಟಾಗಿದೆ.

ಬೀದರ್, ಕಲಬುರಗಿಯಲ್ಲಿ ಸಂಕಷ್ಟ: ಸೆಪ್ಟೆಂಬರ್‌ನಲ್ಲಿ ಬೀದರ್‌ನ 9645 ಹೆಕ್ಟೇರ್ ಪ್ರದೇಶದ ಹೆಸರು, 8210 ಹೆಕ್ಟೇರ್ ಉದ್ದು, 60048 ತೊಗರಿ, 101283 ಸೋಯಾಬೀನ್, 2054 ಹೆಕ್ಟೇರ್ ಕಬ್ಬು ಬೆಳೆ ಹಾನಿಗೊಳಗಾಗಿದೆ. ಕಲಬುರಗಿಯಲ್ಲಿ 3099 ಹೆಕ್ಟೇರ್ ಹೆಸರು, 6145 ಉದ್ದು, 155616 ತೊಗರಿ, 2246 ಸೋಯಾಬೀನ್, 11144 ಕಬ್ಬು, 11201 ಹೆಕ್ಟೇರ್‌ನಲ್ಲಿ ಬೆಳೆದಿದ್ದ ಹತ್ತಿ ಸೇರಿ ಒಟ್ಟಾರೆ 3.71 ಲಕ್ಷ ಹೆಕ್ಟೇರ್‌ಗೂ ಅಧಿಕ ಬೆಳೆ ಹಾನಿಯಾಗಿದೆ.

ಅಕ್ಟೋಬರ್‌ನಲ್ಲಿ ರಾಯಚೂರಿನಲ್ಲಿ 1152 ಹೆಕ್ಟೇರ್ ಭತ್ತ, ಯಾದಗಿರಿಯಲ್ಲಿ 404 ಹೆಕ್ಟೇರ್, ದಾವಣಗೆರೆಯಲ್ಲಿ 238 ಹೆಕ್ಟೇರ್ ಮೆಕ್ಕೆಜೋಳ, ವಿಜಯಪುರದಲ್ಲಿ 51286 ಹೆಕ್ಟೇರ್ ತೊಗರಿ, ಯಾದಗಿರಿಯಲ್ಲಿಬೆಳೆದಿದ್ದ1364 ಹೆಕ್ಟೇರ್ ಪ್ರದೇಶದ ರಾಗಿಗೆ ಹಾನಿಯಾಗಿದೆ. 12 ಜಿಲ್ಲೆಯಲ್ಲಿ ಒಟ್ಟಾರೆ 57914 ಹೆಕ್ಟೇರ್ ಪ್ರದೇಶದ ಬೆಳೆ ಹಾನಿಯಾಗಿದೆ.

15 ದಿನದಲ್ಲಿ 48 ಸಾವಿರ ಹೆಕ್ಟೇರ್‌ಗೆ ಹಾನಿ: ನವೆಂಬರ್ 16 ರವರೆಗೆ 14 ಜಿಲ್ಲೆಯ 48647 ಹೆಕ್ಟೇರ್ ಪ್ರದೇಶದಲ್ಲಿನ ವಿವಿಧ ಬೆಳೆಗಳಿಗೆ ಹಾನಿಯಾಗಿದೆ. ಕೋಲಾರದಲ್ಲಿ ಅತಿ ಹೆಚ್ಚು ಅಂದರೆ 34447 ಹೆಕ್ಟೇರ್ ಬೆಳೆ ಹಾನಿಗೊಳಗಾಗಿದೆ. ರಾಮನಗರ 10371, ಚಾಮರಾಜನಗರ 1566, ಉತ್ತರ ಕನ್ನಡದಲ್ಲಿ794 ಹೆಕ್ಟೇರ್‌ನಲ್ಲಿದ್ದ ಬೆಳೆ ಹಾನಿಯಾಗಿದೆ. ಇನ್ನುಳಿದ ಕೆಲ ಜಿಲ್ಲೆಗಳಲ್ಲಿ ಕಡಿಮೆ ಹಾನಿಯಾಗಿದ್ದು, ಮಳೆ ಮುಂದುವರೆಯುತ್ತಿರುವುದರಿಂದ ಹಾನಿ ಪ್ರಮಾಣ ಇನ್ನೂ ಹೆಚ್ಚಲಿದೆ.



ತಿಂಗಳು	ಬೆಳೆ ಹಾನಿ (ಹೆಕ್ಟೇರ್)
ಜುಲೈ	250322
ಆಗಸ್ಟ್	3421
ಸೆಪ್ಟೆಂಬರ್	371647
ಅಕ್ಟೋಬರ್	57914
ನವೆಂಬರ್	48647
ಒಟ್ಟಾರೆ	731951


ಜಂಟಿ ಸಮೀಕ್ಷೆ

ಕಂದಾಯ ಮತ್ತು ಕೃಷಿ ಇಲಾಖೆಯಿಂದ ಮಳೆ ಹಾನಿ ಜಂಟಿ ಸಮೀಕ್ಷೆ ಕೈಗೊಳ್ಳಲಾಗಿದೆ. ಹೆಚ್ಚು ಮಳೆಯಾಗುತ್ತಿರುವ ಕಾರಣ ಹಾನಿ ವಿವರ ಸಲ್ಲಿಸಲು ಕೆಲ ಜಿಲ್ಲೆಗಳು ಸಮಯಾವಕಾಶ ಕೇಳಿವೆ. ಒಪ್ಪಿಗೆ ನೀಡಲಾಗಿದೆ.

• ತುಷಾರ್ ಗಿರಿನಾಥ್ ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿ

ಟೊಮೇಟೊ ಬಾಕ್ಸ್‌ಗೆ 1200 ರು. ಬಂಪರ್ ಬೆಲೆ; ರೈತರಿಗೆ ಸಂತಸ

ಹರಪನಹಳ್ಳಿ/ಕೋಲಾರ: ರಾಜ್ಯದಲ್ಲಿ ಸುರಿಯುತ್ತಿರುವ ಭಾರಿ ಮಳೆಯಿಂದಾಗಿ ಟೊಮೇಟೊ ಬೆಲೆ ಗಗನಕ್ಕೇರಿದೆ. ಇದು ಗ್ರಾಹಕರ ಕೈ ಸುಡುತ್ತಿದ್ದರೆ, ರೈತನ ಮುಖ ದಲ್ಲಿ ಸಂತೋಷ ಅರಳಿ ಸಿದೆ. ಹರಪ್ಪನಹಳ್ಳಿ ಸಗಟು ಮಾರುಕಟ್ಟೆಯಲ್ಲಿ ಟೊಮೇಟೊ ಕೊಳ್ಳಲು ರಾಜ್ಯ ಹಾಗೂ ಹೊರರಾಜ್ಯದ ಖರೀದಿದಾರರು ಮುಗಿಬೀಳುತ್ತಿದ್ದಾರೆ. ಟೊಮೇಟೊ 1 ಬಾಕ್ಸ್‌ಗೆ (26- 27ಕೆಜಿ) ₹1200ರಿಂದ ₹1500 ದರ ಆಗಿದೆ. ಕಳೆದ ವಾರ ಬಾಕ್ಸ್‌ಗೆ 600-700 ರು. ದರ ಇತ್ತು. ಇಲ್ಲಿ ಬೆಳೆಯುವ ಟೊಮೇಟೊ ಆಂಧ್ರ, ತಮಿಳುನಾಡು, ಕೇರಳ ಹಾಗೂ ರಾಜ್ಯದ ಇತರ ಸ್ಥಳಗಳಿಗೆ ರವಾನೆಯಾಗುತ್ತದೆ. ಏಷ್ಯಾದ ಅತಿದೊಡ್ಡ ಟೊಮೇಟೊ ಮಾರುಕಟ್ಟೆಯಾಗಿರುವ ಕೋಲಾರ ಎಪಿಎಂಸಿಯಲ್ಲೂ ಟೊಮೇಟೊ ಬೆಲೆ ಬಾಕ್ಸ್‌ಗೆ ₹1200ಕ್ಕೂ ಹೆಚ್ಚಾಗಿದೆ.



ಬೆಳೆ ಹಾನಿಗೆ ಪರಿಹಾರ ಬಗ್ಗೆ ಶೀಘ್ರ ಚರ್ಚೆ: ಮುಖ್ಯಮಂತ್ರಿ ಬೊಮ್ಮಾಯಿ

ಬೆಂಗಳೂರು: ರಾಜ್ಯದಲ್ಲಿ ಮಳೆಯಿಂದಾಗಿ ಬೆಳೆ ಹಾನಿಯಾಗಿರುವ ಬಗ್ಗೆ ಸಮೀಕ್ಷೆ ನಡೆಸಿದ್ದು, ಪರಿಹಾರ ನೀಡುವ ಬಗ್ಗೆ ಚರ್ಚೆ ನಡೆಸಲಾಗುವುದು, ಮಳೆ ನಿಂತ ತಕ್ಷಣ ಪರಿಹಾರ ಕೆಲಸ ಕೈಗೆತ್ತಿಕೊಳ್ಳುವಂತೆ ಸೂಚಿಸಲಾಗಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು. ಅವರು ಬುಧವಾರ ಸುದ್ದಿಗಾರರ ಜೊತೆ ಮಾತನಾಡಿ, ಮಳೆ ನಿಂತ ತಕ್ಷಣ ಪರಿಹಾರ ಕಾರ್ಯಗಳಿಗೆ ತಂಡಗಳ ನಿಯೋಜನೆ ಹಾಗೂ ಹೆಚ್ಚಿನ ಜನರನ್ನು ಸೇರ್ಪಡೆಗೊಳಿಸಲು ಈಗಾಗಲೇ ಸೂಚನೆ ನೀಡಲಾಗಿದೆ. ಇದಲ್ಲದೇ ಎನ್‌ಡಿಆರ್‌ಎಫ್, ಎಸ್‌ಡಿಆರ್‌ಎಫ್‌ನ 4 ತಂಡ ಗಳನ್ನು ಬೆಂಗಳೂರಿಗೆ ಸೀಮಿತವಾಗಿ ರಚಿಸುವಂತೆ ಅಧಿಕಾರಿಗಳಿಗೆ ತಿಳಿಸಿರುವುದಾಗಿ ಹೇಳಿದರು. ವಿಪಕ್ಷ ನಾಯಕ ಸಿದ್ದರಾಮಯ್ಯ ಪತ್ರ ಬರೆಯುವ ಮೊದಲೇ ಬೆಳೆ ಸಮೀಕ್ಷೆ ನಡೆಸಿ, ಅಧಿಕಾರಿಗಳ ಬಳಿ ಮಾಹಿತಿ ಪಡೆದಿದ್ದೆವು. ಇವತ್ತು ಭತ್ತ ಖರೀದಿ ಬಗ್ಗೆ ಸಭೆ ನಡೆಸುತ್ತೇನೆ. ತರಕಾರಿ, ಕೃಷಿ ಹಾನಿ ಬಗ್ಗೆ ಕೃಷಿ ಇಲಾಖೆಯ ಜೊತೆ ಸಮಗ್ರವಾಗಿ ಚರ್ಚೆ ನಡೆಸಲಾಗಿದೆ ಎಂದು ಅವರು ಉತ್ತರಿಸಿದರು.

18-11-2021
Kp Pg 06

ಕೃಷಿ ಇಲಾಖೆ ವಿಚಕ್ಷಣ ದಳ ಚುರುಕಿಗೆ ಬಿ.ಸಿ.ಪಾ ಸೂಚನೆ

ಬೆಂಗಳೂರು: ನಕಲಿ ಕೃಷಿ ಉಪಕರಣಗಳು, ರಾಸಾಯನಿಕ ಗೊಬ್ಬರ, ಕೀಟನಾಶಕ ರೈತರಿಗೆ ಸರಬರಾಜು ಆಗದಂತೆ ಕೃಷಿ ವಿಚಕ್ಷಣಾ ದಳ ಇನ್ನಷ್ಟು ಜಾಗೃತರಾಗಿ ಕಾರ್ಯ ನಿರ್ವಹಿಸಬೇಕು, ಇಂತಹ ಕೃತ್ಯಗಳಲ್ಲಿ ಭಾಗಿಯಾದ ಯಾರೇ ಆಗಲಿ ಅವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಕೃಷಿ ಸಚಿವ ಬಿ.ಸಿ. ಪಾಟೀಲ್ ಅಧಿಕಾರಿಗಳಿಗೆ ಸೂಚಿಸಿದರು. ಬುಧವಾರ ತಮ್ಮ ಕಚೇರಿಯಲ್ಲಿ ವಿಚಕ್ಷಣಾ ದಳದ ಪ್ರಗತಿ ಪರಿಶೀಲನೆ ನಡೆಸಿದ ಅವರು, ಕಳಪೆ ರಸಗೊಬ್ಬರ, ಕೀಟ ನಾಶಕಗಳು ತಯಾರಾಗದಂತೆ ನೋಡಿಕೊಳ್ಳಬೇಕು, ಕಾಳಸಂತೆಯಲ್ಲಿ ಮಾರಾಟವಾಗದಂತೆ ತಳಮಟ್ಟದಲ್ಲೇ ಅವುಗಳನ್ನು ಬುಡ ಸಹಿತ ಕಿತ್ತು ಹಾಕಬೇಕು. ರೈತರಿಗೆ ಅನ್ಯಾಯವಾಗುವಂತಹ ಇಂತಹ ಕೃತ್ಯದಲ್ಲಿ ಯಾವುದೇ ಅಧಿಕಾರಿ ಇಲ್ಲವೇ ಬೇರೆ ಆಗಲಿ ಭಾಗಿಯಾಗಿದ್ದರೆ ಅಂತವರ ವಿರುದ್ಧ ನಿರ್ದಾಕ್ಷಿಣ್ಯವಾಗಿ ಕ್ರಮ ಜರುಗಿಸುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು. ಗುಣಮಟ್ಟದ ಪ್ಯಾಕಿಂಗ್‌ಗಳು ರೈತರಿಗೆ ತಲುಪುವಂತೆ ನೋಡಿಕೊಳ್ಳಬೇಕು. ಕೆಳಮಟ್ಟದ ಅಧಿಕಾರಿಗಳ ಗಮನಕ್ಕೆ ಬಾರದೇ ಮೇಲ್ಮಟ್ಟದ ಅಧಿಕಾರಿಗಳ ನಕಲಿ ಕೃಷಿ ಪರಿಕರಗಳನ್ನು ವಶಪಡಿಸಿಕೊಂಡಲ್ಲಿ ಕೆಳ ಹಂತದ ಅಧಿಕಾರಿಗಳಿಗೆ ನೋಟಿಸ್ ನೀಡುವುದಾಗಿ ಎಚ್ಚರಿಸಿದರು.

18-11-2021 Hd Pg 02

ಸೂಕ್ತ ಬೆಲೆ ಸಿಗದ ಭಯ | ಖರ್ಚು ಮಾಡಿದ ಹಣಕ್ಕೆ ಯಾರು ಹೊಣೆ

ಬಿಡದ ಮಳೆಗೆ ಬಾಡಿದ ರೈತ

*ಶರಣು ಕೋಟ್ಯಾಳ

ಕಾರಟಗಿ: ಕಳೆದ ಕೆಲವು ದಿನದಿಂದ ವಾಯುಭಾರ ಕುಸಿತದ ಪರಿಣಾಮ ಸುರಿಯುತ್ತಿರುವ ಅಕಾಲಿಕ ಮಳೆಗೆ ರಾಜ್ಯದ ಭತ್ತದ ಕಣಜ ಎಂದೆ ಖ್ಯಾತಿಯಾದ ಕಾರಟಗಿ ತಾಲೂಕಿನ ಸಾವಿರಾರು ಎಕರೆ ಕೊಯ್ಲಿಗೆ ಬಂದಿರುವ ಭತ್ತದ ಬೆಳೆ ನೆಲಕ್ಕುರುಳಿದೆ.

ಕಟಾವಿಗೆ ಬಂದಿದ್ದ ಬೆಳೆ ನೆಲಕಚ್ಚಿರುವುದರಿಂದ ಕೈಗೆ ಬಂದ ತುತ್ತು ಬಾಯಿಗೆ ಬಾರದಂತಾಗಿದೆ. ಪ್ರತಿವರ್ಷ ಪ್ರಕೃತಿ ಮುನಿಸಿಗೆ ಬೆಳೆ ನಾಶವಾಗುತ್ತಿದ್ದರೆ. ರೈತನ ಸ್ಥಿತಿ ಏನು ಎಂಬುದು ಈಗ ಆತಂಕ ಉಂಟು ಮಾಡಿದೆ.

ಸಾಲ ಮಾಡಿ ತಂದ ಬಿತ್ತನೆ: ಸಾಲ ಮಾಡಿ ಭತ್ತ ಬೀಜ ತಂದು ಬಿತ್ತಲಾಗಿತ್ತು. ಕಟಾವು ಹಂತದಲ್ಲಿ ಸಣ್ಣಮಟ್ಟರೋಗ ಕೂಡ ಕಾಡಿತ್ತು. ಆದರೂ ಶಕ್ತಿ ಮೀರಿ ಬೆಳೆ ಉಳಿಸಿಕೊಂಡಿದ್ದ ರೈತರಿಗೆ ಈಗ ಮಳೆಯಿಂದ ಬೆಳೆ ಸಂಪೂರ್ಣ ನಾಶವಾಗಿದೆ. ಇದರಿಂದಾಗಿ ದಿಕ್ಕು ತೋಚದ ಸ್ಥಿತಿ ಇದೆ.

ಕಟಾವಿಗೂ ದುಬಾರಿ ಹಣಬೇಕು: ನೆಲಕ್ಕೆ ಬಿದ್ದಿರುವ ಭತ್ತವನ್ನು ಕಟಾವು ಯಂತ್ರದಿಂದ ಕೊಯ್ಲು ಮಾಡಿಸುವುದು ಸಾಮಾನ್ಯ ಕೆಲಸವಾಗಿದೆ. ನೆಲ ಕ್ಕೊರಗುವ ಮುಂಚೆಯೇ ತಾಸಿಗೆ 2,500 ರೂ. ಬಾಡಿಗೆ ಕೊಟ್ಟರೂ ಕಟಾವು ಯಂತ್ರಗಳು ಬರಲು ಮೀನಾಮೇಷ ಎಣಿಸಲಾಗುತ್ತಿತ್ತು. ಈಗ ಹೆಚ್ಚು ಬಾಡಿಗೆ ಕೊಟ್ಟು ಕೊಯ್ಲು ಮಾಡಿಸಬೇಕಾದ ಪರಿಸ್ಥಿತಿ ಬಂದೊದಗಿದೆ. ಎಕರೆ ಕೊಯ್ಲಿಗೆ ಎರಡು ತಾಸಾದರೂ ಹಿಡಿಯುತ್ತದೆ. ದುಬಾರಿ ಬಾಡಿಗೆ ತೆರುವುದು ಅನಿವಾರ್ಯ ವಾಗಿದೆ.



ದಿಗಂತ ವಿಶೇಷ

> ಸರ್ವೆ ಕಾರ್ಯ ಆರಂಭಿಸಿ ನಷ್ಟವಾಗಿರುವ ಬೆಳೆಗೆ ಸೂಕ್ತ ಪರಿಹಾರ ನೀಡಲು ಕ್ರಮ ಕೈಗೊಳ್ಳಬೇಕು.
> ■ ನಾರಾಯಣ ಈಡಿಗೇರ, ಅಧ್ಯಕ್ಷರು, ತಾಲೂಕು ರೈತ ಸಂಘ

ಬೆಲೆ ಸಿಗುವುದು ಕಷ್ಟ: ಭತ್ತ ಕಟಾವು ಸಮಯದಲ್ಲಿ ಮಳೆ ಬಂದರೆ ಮಾರುಕಟ್ಟೆಯಲ್ಲಿ ಬೆಲೆ ಸಿಗುವುದಿಲ್ಲ. ಈ ಬಾರಿ ಭತ್ತದ ಬೆಳೆ ಚೆನ್ನಾಗಿ ಬಂದಿದೆ. ಇನ್ನು 10-15 ದಿನದಲ್ಲಿ ಕಟಾವು ಆರಂಭಗೊಳ್ಳಬೇಕಿತ್ತು. ಕಳೆದ ವರ್ಷ ಬೆಳೆ ಹಾನಿಗೊಂಡ ರೈತರಿಗೆ ಸರ್ಕಾರದ ಬೆಳೆ ಪರಿಹಾರ ಬಂದಿಲ್ಲ. ಮಳೆ ಹಾನಿಯ ಪರಿಹಾರ ಯಾವಾಗ ಬರುವುದು ಎಂಬುದು ರೈತರ ಪ್ರಶ್ನೆಯಾಗಿದೆ.

ಪ್ರತಿವರ್ಷವೂ ರೈತರಿಗೆ ಕಷ್ಟ

ಕ್ರಿಮಿನಾಶಕ, ರಸಗೊಬ್ಬರ ಭತ್ತದ ಬೀಜ ಸೇರಿದಂತೆ ಪ್ರತಿ ಎಕರೆಗೆ 35-40 ಸಾವಿರ ಬೆಚ್ಚ ಮಾಡಬೇಕು. ಪ್ರತಿವರ್ಷ ಅತಿವೃಷ್ಟಿ, ಅನಾವೃಷ್ಟಿಯಿಂದ ರೈತರ ಬೆಳೆಗೆ ಹಾನಿ, ಮಳೆ, ಮೋಡ ಕವಿದರೆ ಸಾಕು ಭತ್ತಕ್ಕೆ ಬೆಲೆ ಕುಸಿತವಾಗುವುದು. ರೈತರ ಕಷ್ಟಕ್ಕೆ ಸ್ಪಂದಿಸದ ಜನಪ್ರತಿನಿಧಿಗಳು, ಅಧಿಕಾರಿಗಳು ಕೂಡಲೇ ಮಾಡಬೇಕೆಂದು ರೈತ ಪರಶುರಾಮಉಪ್ಪಾರ, ಸಣ್ಣ ರಾಮಣ್ಣ ಆಗ್ರಹಿಸಿದರು.


ಕುಂಬಳ ಇದ್ದಲ್ಲೇ ಕೊಳೆಯಿತು

ಮಾಗಡಿ: ಕುಂಬಳಕಾಯಿ ಬೆಳೆದ ರೈತನಿಗೆ ಸಮರ್ಪಕ ಬೆಲೆಯಿಲ್ಲದೆ ಕಂಗಾಲಾಗಿ ಕುಟುಂಬ ಬೀದಿಗೆ ಬರುವಂತಾಗಿದೆ. ತಾಲೂಕಿನ ಗುಡ್ಡಹಳ್ಳಿ ರೈತ ಗಂಗಣ್ಣ ಸುಮಾರು 50 ವರ್ಷದಿಂದ ಕುಂಬಳ ಕಾಯಿ ಬೆಳೆದು ಜೀವನ ನಡೆಸುತ್ತಿದ್ದವರು. ಪ್ರಗತಿಪರ ರೈತ ಕುಂಬಳ ಕಾಯಿ ಗಂಗಣ್ಣ ಎಂದರೆ ರಾಜ್ಯದಲ್ಲಿ ಹೆಸರುವಾಸಿ.

ಸಾವನದುರ್ಗ ಅರಣ್ಯ ಪ್ರದೇಶಕ್ಕೆ ಹೊಂದು ಕೊಂಡತಿರುವ ಗುಡ್ಡಹಳ್ಳಿ ಗ್ರಾಮದ ಜಮರಿಗೆ ಪ್ರಾಣಿಗಳ ಉಪಟಳ. ಆದರೂ ಛಲ ಬಿಡದೆ ಎರಡೂವರೆ ಎಕರೆ ಜಮೀನಿನಲ್ಲಿ ಬೃಹತ್ ಗಾತ್ರದ ಕುಂಬಳ ಕಾಯಿ ಬೆಳೆದಿದ್ದರು.

ಕೋವಿಡ್‌ನಿಂದಾಗಿ ಮಾರುಕಟ್ಟೆ ಕುಸಿತ: ಹೊರರಾಜ್ಯದಲ್ಲಿ ಕೋವಿಡ್‌ನಿಂದಾಗಿ ಕೇರಳ, ಮುಂಬೈಯಲ್ಲಿ ಕುಂಬಳಕಾಯಿಗೆ ಬೇಡಿಕೆ ಇಲ್ಲದ್ದಾಗಿದೆ. ಇವನ್ನು ಕೀಳಲಾಗದೆ ಗಿಡದಲ್ಲೆ ಕೊಳೆಯುವಂತಾಗಿದೆ, ಮತಷ್ಟು ಕಿತ್ತ ಕುಂಬಳ ಕಾಯಿ ಇದ್ದಲ್ಲೆ ಕೊಳೆಯುತ್ತಿವೆ. ಉತ್ತಮ ಬೆಳೆ ಸಿಕ್ಕಿದಿದ್ದರೆ ಸುಮಾರು 3 ಲಕ್ಷ ರೂ. ಲಾಭ ಸಿಗುತ್ತಿತ್ತು ಎಂದು ಬೆಳೆಗಾರ ಕುಂಬಳ ಕಾಯಿ ಗಂಗಣ್ಣ ಕಣ್ಣೀರು ಹಾಕುವರು.

ದಾಸ್ತಾನು ಮಾಡಿದ ಕುಂಬಳಕ್ಕೆ ನೊಣದ ಕಾಟ: ಇಂದು ನಾಳೆ ಕುಂಬಳಕಾಯಿಗೆ ಬೇಡಿಕೆ ಬರಲಿದೆ ಎಂದು ರೈತ ಗಂಗಣ್ಣ ಕುಂಬಳ ಕಾಯಿ ಕಿತ್ತು ಒಂದೆಡೆ ಶೇಖರಣೆ ಮಾಡಿದರು. ಆದರೂ ಕುಂಬಳಕ್ಕೆ ಹೂಜಿ ನೊಣಗಳ ಕಾಟದಿಂದಾಗಿ ಕೊಳೆತು ನಾಶ ವಾಗುತ್ತಿದೆ. ಇನ್ನೊಂದೆಡೆ ಕುಂಬಳಕಾಯಿಯಿಂದ ಬೀಜ ತೆಗೆಯುವ ಕಾರ್ಯ ಮುಂದುವರಿಸಲಾಗಿದೆ.



> ಸುಮಾರು 50 ವರ್ಷದಿಂದ ಕುಂಬಳಕಾಯಿ ಬೆಳೆದು ಲಕ್ಷಾಂತರ ರೂಪಾಯಿ ಸಂಪಾದನೆ ಮಾಡುತ್ತಿದ್ದೇನು. ಕೊವಿಡ್ ನಿಂದಾಗಿ ಕೇರಳ, ತಮಿಳುನಾಡು, ಮುಂಬೈ ಸೇರಿದಂತೆ ನೆರೆ ರಾಜ್ಯದ ಹೋಟೆಲ್, ಶುಭಕಾರ್ಯಗಳಿಗೆ ಬಳಸದ ಕಾರಣ ನಷ್ಟ ಉಂಟಾಗಿದೆ.
> ■ ಕುಂಬಳಕಾಯಿ ಗಂಗಣ್ಣ, ಪ್ರಗತಿ ಪರ ರೈತ

> ರೈತ ಗಂಗಣ್ಣ ಬೆಳೆದಿರುವ ಕುಂಬಳಕಾಯಿ ನಷ್ಟ ಉಂಟಾಗಿರುವ ಬಗ್ಗೆ ಸರಕಾರಕ್ಕೆ ವರದಿ ನೀಡುತ್ತೇನೆ. ರೈತ ಗಂಗಣ್ಣ ಅವರಿಗೆ ಪರಿಹಾರ ಕೊಡಿಸಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ.
> ■ ನಾಗರಾಜು, ಹಿರಿಯ ನಿರ್ದೇಶಕ, ತೋಟಗಾರಿಕೆ ಇಲಾಖೆ